# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1009 (೩೩೦) |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 10.03.2021 |
| ಉತ್ತರಿಸುವ ಸಚಿವರು | : | ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರು. |

| ಕ್ರ. ಸಂ ಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೇಲಿಕೇರಿ ಬಂದರಿನಲ್ಲಿ ಪ್ರಸ್ತುತದಲ್ಲಿ ನಡೆಯುತ್ತಿರುವ ಬಂದರಿಗೆ ಸಂಬಂಧಿಸಿದ ಚಟುವಟಿಕೆಗಳು ಯಾವುವು; | ಪ್ರಸ್ತುತ ಬೇಲೆಕೇರಿ ಬಂದರಿನಲ್ಲಿ ಯಾವುದೇ ನೌಕಾ ಚಟುವಟಿಕೆಗಳು ನಡೆಯುತ್ತಿಲ್ಲ. |
| ಆ) | ಬೇಲೆಕೇರಿ ಬಂದರಿನಲ್ಲಿ ಲಭ್ಯವಿರುವ ಖಾಲಿ ಜಮೀನು ಯಾವ ಯಾವ ಖಾಸಗಿ ಕಂಪನಿಗಳಿಗೆ ಯಾವ ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ವಿವಿಧ ಆದೇಶಗಳಲ್ಲಿ ಬೇಲೆಕೇರಿ ಬಂದರಿನಿಂದ ಕಬ್ಬಿಣದ ಅದಿರು ದಾಸ್ತಾನು ಮತ್ತು ರಫ್ತು ಚಟುವಟಿಕೆಗಳ ಉದ್ದೇಶಕ್ಕಾಗಿ ಈ ಕೆಳಗಿನ ಬಂದರು ಬಳಕೆದಾರರಿಗೆ ಬಂದರು ಜಾಗವನ್ನು ದೀರ್ಘಾವಧಿ ಗುತ್ತಿಗೆ ಆಧಾರದಲ್ಲಿ ಮಂಜೂರು ಮಾಡಲಾಗಿತ್ತು.<br>1. ಅದಾನಿ ಎಂಟರ್ ಪ್ರೈಸಸ್ ಲಿ. ಇವರಿಗೆ 1,09,611 ಚ.ಮೀ.<br>2. ಶ್ರೀ ಮಲ್ಲಿಕಾರ್ಜುನ್ ಪ್ರೈ.ಲಿ ಇವರಿಗೆ 81,220 ಚ.ಮೀ.<br>3. ಸಾಲಗಾಂವಕರ್ ಮೈನಿಂಗ್ ಇಂಡಸ್ಟ್ರಿಸ್ ಪ್ರೈ.ಲಿ ಇವರಿಗೆ 32,000 ಚ.ಮೀ.<br>4. ರಾಜ್‌ಮಹಲ್ ಸಿಲ್ಕ್ ಇವರಿಗೆ 3,000 ಚ.ಮೀ.<br>**ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ** |
| ಇ) | ಪ್ರಸ್ತುತ ಬೇಲೇಕೇರಿ ಬಂದರಿನಲ್ಲಿ ವಿವಿಧ ಖಾಸಗಿ ಕಂಪನಿಗಳು ಶೇಖರಿಸಿದ್ದ ಕಬ್ಬಿಣದ ಅದಿರು ರಾಶಿಗಳನ್ನು ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿದ್ದು, ಈ ರಾಶಿಗಳನ್ನು ಕೋರ್ಟ್ ಆದೇಶದ ಅನ್ವಯ ವಿಲೇವಾರಿ ಮಾಡಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುವ ಕಬ್ಬಿಣದ ಅದಿರಿನ ವಿಲೇವಾರಿಗಾಗಿ ಶ್ರೀ ಅಶೋಕ ಎನ್. ನಾಯ್ಕ, ನಿವೃತ್ತ ಸಾರ್ವಜನಿಕ ಅಭಿಯೋಜಕರು, ಮಂಗಳೂರು ಇವರನ್ನು ಜೆ.ಎಂ. ಎಫ್.ಸಿ. ನ್ಯಾಯಾಲಯ, ಅಂಕೋಲಾ ಇಲ್ಲಿ ಪ್ರಕರಣ ದಾಖಲಿಸಲು ಹಾಗೂ ಸರ್ಕಾರದ ಪರವಾಗಿ ವಾದ ಮಂಡಿಸಲು ವಿಶೇಷ ಸರ್ಕಾರಿ ಅಭಿಯೋಜಕರನ್ನಾಗಿ ನೇಮಿಸಲಾಗಿದೆ.<br>ದಿನಾಂಕ:13.01.2020 ರಂದು ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ, ಅಂಕೋಲಾದಲ್ಲಿ ವಶಪಡಿಸಿಕೊಂಡಿರುವ ಕಬ್ಬಿಣದ ಅದಿರನ್ನು ವಿಲೇವಾರಿ ಮಾಡಲು ಅನುಮತಿ ಕೋರಿ ಮಧ್ಯಂತರ ಅರ್ಜಿಯನ್ನು ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:05.10.2020 ರಂದು ಅರ್ಜಿಯನ್ನು ತಿರಸ್ಕರಿಸಿರುತ್ತದೆ. |

| ಕ್ರ. ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | | ಸದರಿ ಆದೇಶದ ವಿರುದ್ಧ ಮಾನ್ಯ ಸತ್ರ ನ್ಯಾಯಾಲಯ, ಕಾರವಾರ ಇಲ್ಲಿ ದಿನಾಂಕ:05.02.2021 ರಂದು ಮೇಲ್ಮನವಿಯನ್ನು ಸಲ್ಲಿಸಿದ್ದು, ಮುಂದಿನ ವಿಚಾರಣೆಯನ್ನು ದಿನಾಂಕ: 09.03.2021 ರಂದು ನಿಗದಿಪಡಿಸಲಾಗಿದೆ. ಪ್ರಸ್ತುತ ಪ್ರಕರಣವು ಮಾನ್ಯ ಸತ್ರ ನ್ಯಾಯಾಲಯ, ಕಾರವಾರ ಇಲ್ಲಿ ಬಾಕಿಯಿರುತ್ತದೆ. |
| ಈ) | ಈ ರೀತಿ ಗುತ್ತಿಗೆ ನಿಬಂಧನೆ ಉಲ್ಲಂಘಿಸಿದ ಕಂಪನಿಗಳ ಗುತ್ತಿಗೆ ಕರಾರನ್ನು ರದ್ದುಪಡಿಸಲಾಗಿದೆಯೇ? (ಹಾಗಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು) | ಗುತ್ತಿಗೆ ನಿಬಂಧನೆಗಳನ್ನು ಉಲ್ಲಂಘಿಸಿದ ಕಂಪನಿಗಳ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.<br><br>**ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.** |

**ಕಡತ ಸಂಖ್ಯೆ: IDD 76 PSP 2021 (E-452353)**

(ಎಸ್. ಅಂಗಾರ)
**ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು**

# ಅನುಬಂಧ-1

## ಬೇಲೇಕೇರಿ ಬಂದರಿನ ಭೂಮಿಯನ್ನು ಮಂಜೂರು ಮಾಡಿರುವ ಬಗ್ಗೆ ವಿವರ

ಬೇಲೇಕೇರಿ ಬಂದರಿನಲ್ಲಿ ಬಂದರು ಜಾಗವನ್ನು ಬಂದರು ಬಳಕೆದಾರರಿಗೆ ತಮ್ಮ ಸ್ವಂತ ಬಂಡವಾಳ ಹೂಡಿಕೆಯಿಂದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಂಡು ಕಬ್ಬಿಣದ ಅದಿರಿನ ಶೇಖರಣೆ, ನಿರ್ವಹಣೆ ಮತ್ತು ರಫ್ತು ಮಾಡುವ ಉದ್ದೇಶಕ್ಕಾಗಿ ಷರತ್ತುಗಳನ್ನು ವಿಧಿಸಿ ಸರ್ಕಾರದ ವಿವಿಧ ಆದೇಶಗಳಲ್ಲಿ 1. ಮೆ|| ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಇವರಿಗೆ ಒಟ್ಟು 1,09,611 ಚ.ಮೀ. 2. ಮೆ|| ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್., ಇವರಿಗೆ ಒಟ್ಟು: 81,220 ಚ.ಮೀ. 3. ಮೆ|| ಸಾಳಗಾಂವಕರ್ ಮೈನಿಂಗ್ ಇಂಡಸಸ್ ಪ್ರೈವೇಟ್ ಲಿಮಿಟೆಡ್., ಇವರಿಗೆ ಒಟ್ಟು: 32,000 ಚ.ಮೀ. 4. ಮೆ|| ರಾಜ್‌ಮಹಲ್ ಸಿಲ್ಕ್ಸ್, ಬೆಂಗಳೂರು, ಇವರಿಗೆ ಒಟ್ಟು: 3,000 ಚ.ಮೀ. ಬಂದರು ಭೂಮಿಯನ್ನು ದೀರ್ಘಾವಧಿ ಗುತ್ತಿಗೆ ಆಧಾರದಲ್ಲಿ ಮಂಜೂರು ಮಾಡಲಾಗಿದ್ದು, ಅದರ ವಿವರ ಕೆಳಗಿನಂತಿದೆ.

| ಕ್ರ. ಸಂ. | ಬಂದರು ಬಳಕೆದಾರರ ಹೆಸರು | ಮಂಜೂರಾದ ಭೂಮಿಯ ವಿಸ್ತೀರ್ಣ (ಚ.ಮೀ. ಗಳಲ್ಲಿ) | ಸರ್ಕಾರದ ಆದೇಶದ ಸಂಖ್ಯೆ | ಅವಧಿ |
|---|---|---|---|---|
| 1. | ಮೆ\|\| ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್. | 62,140 | ಲೋಇ-230/ಪಿಎಸ್‌ಪಿ: 2004 ದಿನಾಂಕ : 18.01.2006. | 30 ವರ್ಷ |
| | | 1,971 | ಲೋಇ-239/ಪಿಎಸ್‌ಪಿ: 2005 ದಿನಾಂಕ : 31.03.2006. | 30 ವರ್ಷ |
| | | 17,000 | ಲೋಇ-134/ಪಿಎಸ್‌ಪಿ: 2005 ದಿನಾಂಕ: 31.03.2006. | 5 ವರ್ಷ |
| | | 28,500 | ಲೋಇ-223/ಪಿಎಸ್‌ಪಿ: 2006(II). ದಿನಾಂಕ : 31.07.2009. | 1 ವರ್ಷ |
| | | **ಒಟ್ಟು 1,09,611** | | |
| 2. | ಮೆ\|\| ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್. | 12,420<br>35,000 | ಲೋಇ- 117/ಪಿಎಸ್‌ಪಿ:2005. ದಿನಾಂಕ : 18.01.2006. | 30 ವರ್ಷ |
| | | 11,000 | ಲೋಇ-163/ಪಿಎಸ್‌ಪಿ: 2009. ದಿನಾಂಕ: 04.02.2010. | 30 ವರ್ಷ |
| | | 22,300 | ಲೋಇ- 223/ಪಿಎಸ್‌ಪಿ: 2006(I) ದಿನಾಂಕ : 31.07.2009. | 1 ವರ್ಷ |
| | | 500 | ಲೋಇ-101/ ಪಿಎಸ್‌ಪಿ:6: 2006 ದಿನಾಂಕ: 06.11.2006. | 30 ವರ್ಷ |
| | | **ಒಟ್ಟು 81,220** | | |

| | | | | |
|---|---|---|---|---|
| 3. | ಮೆ\|\| ಸಾಳಗಾಂವಕರ್ ಮೈನಿಂಗ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್. | 10,000 | ಲೋಇ-42/ಪಿಎಸ್‌ಪಿ: 2003. ದಿನಾಂಕ : 18.01.2006. | 30 ವರ್ಷ |
| | | 22,000 | ಲೋಇ- 223/ಪಿಎಸ್‌ಪಿ: 2006(III) ದಿನಾಂಕ: 31.07.2009. | 1 ವರ್ಷ |
| | | **ಒಟ್ಟು 32,000** | | |
| 4. | ಮೆ\|\| ರಾಜ್‌ಮಹಲ್ ಸಿಲ್ಕ್ಸ್ ಬೆಂಗಳೂರು | 3,000 | ಲೋಇ- 220/ಪಿಎಸ್‌ಪಿ: 2004 ದಿನಾಂಕ : 03.03.2007. | 10 ವರ್ಷ |
| | | **ಒಟ್ಟು 3,000** | | |

# ಅನುಬಂಧ-2

## ಬೇಲೇಕೇರಿ ಬಂದರಿನಲ್ಲಿ ಮಂಜೂರು ಮಾಡಿದ ಬಂದರು ಜಾಗದ ಗುತ್ತಿಗೆಯನ್ನು ರದ್ದುಪಡಿಸಿದ ಸರ್ಕಾರದ ಆದೇಶಗಳ ವಿರುದ್ಧ ಬಂದರು ಬಳಕೆದಾರರು ನ್ಯಾಯಾಲಯದಲ್ಲಿ ದಾಖಲಿಸಿದ ಪ್ರಕರಣಗಳ ವಿವರ

***

### ಮೆ|| ಅದಾನಿ ಎಂಟರ್ ಪ್ರೈಸಸ್ ಲಿಮಿಟೆಡ್.,

1. ಮೆ|| ಅದಾನಿ ಎಂಟರ್ ಪ್ರೈಸಸ್ ಲಿಮಿಟೆಡ್.,ಕಂಪನಿಯವರಿಗೆ ಸರ್ಕಾರವು ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಿ ಅವರಿಂದ ಲಿಖಿತ ವಿವರಣೆಯನ್ನು ಪಡೆದು ಸರ್ಕಾರದ ಆದೇಶ ಸಂ:ಲೋಇ/279/ಪಿಎಸ್‌ಪಿ/2010 ದಿನಾಂಕ:30.08.2014 ರಲ್ಲಿ ಆದೇಶದಲ್ಲಿ ಬಂದರು ಜಾಗದ ಗುತ್ತಿಗೆಯನ್ನು ರದ್ದುಪಡಿಸಿರುವುದನ್ನು ಮತ್ತೊಮ್ಮೆ ಸ್ಥಿರಿಕರಿಸಿದೆ.

2. ಸದರಿ ಸರ್ಕಾರದ ಆದೇಶವನ್ನು ರದ್ದು ಪಡಿಸುವಂತೆ ಪುನಃ ಸದರಿ ಕಂಪನಿಯವರು W.P.No: 109220-223/2014 ನ್ನು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇಲ್ಲಿ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡವು ಉದ್ದೇಶಿತ ಸರ್ಕಾರದ ಆದೇಶಕ್ಕೆ ತಾತ್ಕಾಲಿಕ ತಡೆ ಆಜ್ಞೆಯನ್ನು ಹೊರಡಿಸಿ ಮಧ್ಯಂತರ ಆದೇಶವನ್ನು ನೀಡಿದೆ.

3. ಈ ಪ್ರಕರಣದ ಬಗ್ಗೆ ಸರ್ಕಾರದಿಂದ ಸರ್ಕಾರಿ ನ್ಯಾಯಾವಾದಿಯನ್ನು ನಿಯೋಜಿಸಿದ್ದು, ಬಂದರು ಇಲಾಖೆಯ ಪರವಾಗಿ ಆಕ್ಷೇಪಣಾ ಹೇಳಿಕೆ ದಾಖಲಿಸಿ, ಪ್ರಕರಣದ ಇತ್ಯರ್ಥಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಪ್ರಸಕ್ತ ಸದರಿ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ವಿಚಾರಣೆಯ ಹಂತದಲ್ಲಿದೆ.

### ಮೆ|| ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ ಲಿ.

1. ದಿನಾಂಕ:24.09.2018, 15.10.2018 ಮತ್ತು 28.11.2018 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಸಮಕ್ಷಮ ನಡೆದ ವಿಚಾರಣೆಯ ಆದೇಶದಲ್ಲಿ ಮೆ|| ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ ಲಿ. ಇವರಿಗೆ ಬೇಲೇಕೇರಿ ಬಂದರಿನಲ್ಲಿ ಕಬ್ಬಿಣ ಅದಿರು ರಫ್ತು ಉದ್ದೇಶಕ್ಕೆ ಮಂಜೂರು ಮಾಡಿರುವ ಒಟ್ಟೂ 81,220 ಚ.ಮೀ ಬಂದರು ಭೂಮಿಯ ಗುತ್ತಿಗೆಯನ್ನು ರದ್ದು ಪಡಿಸಿರುತ್ತಾರೆ. ಪ್ರಸ್ತುತ ಸದರಿ ಬಂದರು ಜಾಗವು ಬಂದರು ಇಲಾಖೆಯ ವಶದಲ್ಲಿರುತ್ತದೆ.

2. ದಿನಾಂಕ:28.11.2018 ರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ವಿಚಾರಣೆಯ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಶರತ್ತುಗಳನ್ನು ಪೂರೈಸುವ ಶರತ್ತಿಗೊಳಪಟ್ಟು ಬಂದರು ಭೂಮಿಯನ್ನು ಗುತ್ತಿಗೆ ಪಡೆಯಲು ಹೊಸದಾಗಿ ಅರ್ಜಿ ಸಲ್ಲಿಸುವ ಸ್ವತಂತ್ರವನ್ನು ಅರ್ಜಿದಾರರು ಹೊಂದಿರುತ್ತಾರೆ ಎಂದು ತಿಳಿಸಿಲಾಗಿದೆ.

**ಮೆ|| ರಾಜ್ ಮಹಲ್ ಸಿಲ್ಕ್, ಬೆಂಗಳೂರು**

1. ಮೆ|| ರಾಜ್ ಮಹಲ್ ಸಿಲ್ಕ್, ಬೆಂಗಳೂರು ಇವರಿಗೆ ಬೇಲೇಕೇರಿ ಬಂದರಿನಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಮಂಜೂರು ಮಾಡಿದ 3000 ಚ.ಮೀ ಬಂದರು ಜಾಗದ ಗುತ್ತಿಗೆಯನ್ನು ಸರ್ಕಾರದ ಆದೇಶ ಸಂಖ್ಯೆ:ಲೋಇ-168/ಪಿಎಸ್/2010ದಿನಾಂಕ: 08.07.2010 ರಲ್ಲಿ ರದ್ದು ಪಡಿಸಿ ಆದೇಶಿಸಲಾಗಿದೆ. ಆದರೆ ಸದರಿ ಸಂಸ್ಥೆಯು ಸರ್ಕಾರದ ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯ ಬೆಂಗಳೂರಿನಲ್ಲಿ W.P.No: 35322/2010 ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಯ ಬಗ್ಗೆ ನ್ಯಾಯಾಲಯವು ವಿಚಾರಣೆ ನಡೆಸಿ, ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಲೋಇ 192 ಪಿಎಸ್‌ಪಿ 2012, ದಿನಾಂಕ: 30.08.2014 ರಲ್ಲಿ ಸದರಿ ಸಂಸ್ಥೆಯವರಿಗೆ ಮಂಜೂರು ಮಾಡಲಾದ 3000 ಚ.ಮೀ ಬಂದರು ಜಾಗವನ್ನು ರದ್ದುಪಡಿಸಿ ಆದೇಶಿಸಲಾಗಿದೆ.

2. ಮೆ|| ರಾಜ್ ಮಹಲ್ ಸಿಲ್ಕ್, ಬೆಂಗಳೂರು ಇವರು ಸರ್ಕಾರದ ಸದರಿ ಆದೇಶವನ್ನು ರದ್ದು ಪಡಿಸುವಂತೆ ಕೋರಿ ಮಾನ್ಯ ಉಚ್ಛ ನ್ಯಾಯಾಲಯ ಧಾರವಾಡದಲ್ಲಿ ರಿಟ್ ಪಿಟಿಷನ್ ನಂ.109967/2016 ನ್ನು ದಾಖಲಿಸಿರುತ್ತಾರೆ. ಈ ಬಗ್ಗೆ ಕಂಡಿಕೆವಾರು ಷರಾವನ್ನು ಇಲಾಖೆಯ ಪರವಾಗಿ ಸರ್ಕಾರಿ ನ್ಯಾಯಾವಾದಿಗಳಿಗೆ ಸಲ್ಲಿಸಲಾಗಿರುತ್ತದೆ. ಪ್ರಕರಣವು ವಿಚಾರಣೆ ಹಂತದಲ್ಲಿದೆ.

3. ಪ್ರಸಕ್ತ ಸದರಿ 3000 ಚ.ಮೀ ಬಂದರು ಜಾಗವು ಬಂದರು ಇಲಾಖೆಯ ವಶದಲ್ಲಿದೆ.

**ಮೆ|| ಸಾಲಗಾಂವಕರ ಮೈನಿಂಗ್ ಇಂಡಸ್ಟ್ರೀಸ್, ಹೊಸಪೇಟೆ**

1. ಸರ್ಕಾರದ ಆದೇಶ ಸಂಖ್ಯೆ: ಲೋಇ 192 ಪಿಎಸ್‌ಪಿ 2012 ದಿನಾಂಕ: 30.08.2014 ರಲ್ಲಿ ಮೆ|| ಸಾಲಗಾಂವಕರ ಮೈನಿಂಗ್ ಇಂಡಸ್ಟ್ರೀಸ್, ಹೊಸಪೇಟೆ ಇವರಿಗೆ ಮಂಜೂರು ಮಾಡಲಾದ 3000 ಚ.ಮೀ ಬಂದರು ಜಾಗವನ್ನು ಅಂತಿಮವಾಗಿ ರದ್ದುಪಡಿಸಿ ಆದೇಶಿಸಲಾಗಿರುತ್ತದೆ.

2. ಪ್ರಸಕ್ತ ಸದರಿ 32,000 ಚ.ಮೀ ಬಂದರು ಜಾಗವು ಬಂದರು ಇಲಾಖೆಯ ವಶದಲ್ಲಿದೆ.